# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬಲು ಹಾಲಿ ಇರುವ ನಿರ್ಬಂಧವನ್ನು ಸಡಿಲಿಸುವ ಬಗ್ಗೆ.

**ಓದಲಾಗಿದೆ :**
1] ದಿನಾಂಕ:31-01-95ರ ಅಧಿಕೃತ ಜ್ಞಾಪನ ಸಂಖ್ಯೆ:ಇಡಿ 450 ಎಸ್‌ಇಪಿ 1992.
2] ದಿನಾಂಕ: 02-02-2000ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99ರಲ್ಲಿ ಒಳಗೊಂಡ ನಿಯಮಗಳು.
3] ದಿನಾಂಕ: 03-02-2001ರ ಅಧಿಸೂಚನೆ ಸಂಖ್ಯೆ: ಇಡಿ 65 ವಿವಿಧ 2000.
4] ದಿನಾಂಕ: 07-08-2002ರ ಸುತ್ತೋಲೆ ಸಂಖ್ಯೆ: ಇಡಿ 137 ಎಸ್‌ಇಪಿ 2001.
5] ದಿನಾಂಕ: 11-09-2002ರ ಸುತ್ತೋಲೆ ಸಂಖ್ಯೆ: ಇಡಿ 137 ಎಸ್‌ಇಪಿ 2001.
6] ದಿನಾಂಕ: 13-11-2002ರ ಸುತ್ತೋಲೆ ಸಂಖೆಸ್ಯ: ಇಡಿ 137 ಎಸ್‌ಇಪಿ 2001.
7] ದಿನಾಂಕ: 17-01-2004ರ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2004.
8] ದಿನಾಂಕ: 05-07-2004ರ ಆದೇಶ ಸಂಖ್ಯೆ: ಎಫ್‌ಡಿ 02 ಬಿಇಎಂ 2003.
9] ದಿನಾಂಕ:28-10-96ರ ಸರ್ಕಾರಿ ಆದೇಶ ಸಂಖ್ಯೆ:ಇಡಿ155 ಎಸ್‌ಓಹೆಚ್ 95[1].
10]ದಿನಾಂಕ: 01-02-2006ರ ಸರ್ಕಾರಿ ಆದೇಶ ಸಂಖ್ಯೆ:ಇಡಿ 19 ಟಿಪಿಯು 2004.

**ಪ್ರಸ್ತಾವನೆ:**

01] ಮೇಲೆ ಕ್ರಮ ಸಂಖ್ಯೆ: [1]ರಲ್ಲಿ ಓದಲಾದ ದಿನಾಂಕ: 31-01-95ರ ಅಧಿಕೃತ ಜ್ಞಾಪನದನ್ವಯ ಅನುದಾನಿತ ಖಾಸಗಿ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಆಯಾಯ ಆಡಳಿತ ಮಂಡಳಿಗಳು ಮಾಡಿದ ನೇಮಕಾತಿಗಳ ಅನುಮೋದನೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ: [2]ರಲ್ಲಿ ಓದಲಾದ ದಿನಾಂಕ: 02-02-2000ರ ಅಧಿಸೂಚನೆಯನ್ವಯ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ನೇಮಕಾತಿ ಸಿಬ್ಬಂದಿ ಮಾದರಿ, ನೌಕರರ ಸೇವಾ ಷರತ್ತುಗಳು ಇತ್ಯಾದಿಯ ಕುರಿತು ನಿಯಮಗಳನ್ನು ರೂಪಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [3]ರಲ್ಲಿ ಓದಲಾದ ದಿನಾಂಕ: 03-02-2001ರ ಅಧಿಸೂಚನೆಯನ್ವಯ ದಿನಾಂಕ: 02-02-2000ರ ನಿಯಮಗಳಲ್ಲಿನ ಅನುಬಂಧಕ್ಕೆ ತಿದ್ದುಪಡಿ ತಂದು, ತ್ರಿಸದಸ್ಯ ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [4]ರಲ್ಲಿ ಓದಲಾದ ದಿನಾಂಕ: 07-08-2000ರ ಸುತ್ತೋಲೆಯನ್ವಯ, ಹೆಚ್ಚುವರಿ ಶಿಕ್ಷಕರಿಂದಾಗಿ ನೇಮಕಾತಿ ಅನುಮೋದನೆಗೆ ಇದ್ದ ನಿರ್ಬಂಧವನ್ನು ಸಡಿಲಿಸಿ, ದಿನಾಂಕ: 06-08-2004ರವರೆಗೆ ಉದ್ಭವವಾದಂತಹ [ಅನುದಾನಿತ] ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿತ್ತು. ಮೇಲೆ ಕ್ರಮ ಸಂಖ್ಯೆ: [5]ರಲ್ಲಿ ಓದಲಾದ ದಿನಾಂಕ: 11-09-2002ರ ಸುತ್ತೋಲೆಯನ್ವಯ, ನೇಮಕಾತಿಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರ ಆಯಾಯಾ ಜಿಲ್ಲೆಗಳ ಉಪ ನಿರ್ದೇಶಕರು ಆಗಿರುತ್ತಾರೆಂದು ಸ್ಪಷ್ಟಪಡಿಸಲಾಯಿತು. ಮೇಲೆ ಕ್ರಮ ಸಂಖ್ಯೆ: [6]ರಲ್ಲಿ ಓದಲಾದ ದಿನಾಂಕ: 13-11-2002ರ ಸುತ್ತೋಲೆಯನ್ವಯ, ದಿನಾಂಕ: 07-08-2002ರ ಸುತ್ತೋಲೆಯನ್ನು ಭಾಗಶ: ಮಾರ್ಪಡಿಸಿ, ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ಉಪ ನಿರ್ದೇಶಕರಾಗಿರುತ್ತಾರೆಂದು ಸ್ಪಷ್ಟೀಕರಿಸಲಾಗಿತ್ತು. ಆದರೆ, ನಂತರದ ಮೇಲೆ ಕ್ರಮ ಸಂಖ್ಯೆ: [7]ರಲ್ಲಿ ಓದಲಾದ ದಿನಾಂಕ: 17-01-2004ರ ಆದೇಶದನ್ವಯ ದಿನಾಂಕ: 31-01-95ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಮೂಲಕ ನೇಮಕಾತಿ ಅನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯಾಯೋಜಿಸಲಾಗಿದ್ದ ಅಧಿಕಾರವನ್ನು ಮತ್ತು ತತ್ಸಂಬಂಧ ಇತರೆ ಯಾವುದೇ ಪ್ರತ್ಯಾಯೋಜಿತ ಅಧಿಕಾರಗಳು ಚಾಲ್ತಿಯಲ್ಲಿದ್ದಾಗ್ಯೂ ಕೂಡ ಈ ಎಲ್ಲಾ ಪ್ರತ್ಯಾಯೋಜಿತ ಅಧಿಕಾರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ. ಮೇಲೆ ಕ್ರಮ ಸಂಖ್ಯೆ: [8]ರಲ್ಲಿ ಓದಲಾದ

ದಿನಾಂಕ: 05-07-2004ರ ಆದೇಶದನ್ವಯ, ಆರ್ಥಿಕ ಮಿತವ್ಯಯ ಇರುವುದರಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬತಕ್ಕದ್ದಲ್ಲವೆಂದು ನಿರ್ಬಂಧ ವಿಧಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [9]ರಲ್ಲಿ ಓದಲಾದ ದಿನಾಂಕ: 28-10-1996ರ ಸರ್ಕಾರಿ ಆದೇಶದನ್ವಯ, ಅನುದಾನಿತ ಖಾಸಗಿ ಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ವಿಭಾಗ/ವಿಷಯಗಳನ್ನು ಅದರಲ್ಲಿ ಉಲ್ಲೇಖಿಸಲಾದ ಆಯವ್ಯಯದ ಶೇಕಡಾ 3ರ ಉಳಿತಾಯದಲ್ಲಿ ಅನುದಾನಕ್ಕೆ ಒಳಪಡಿಸಲು ಆಸ್ಪದ ಕಲ್ಪಿಸಲಾಗಿದ್ದು, ಮೇಲೆ ಕ್ರಮ ಸಂಖ್ಯೆ: [10]ರಲ್ಲಿ ಓದಲಾದ ದಿನಾಂಕ: 01-02-2006ರ ಆದೇಶದನ್ವಯ, ದಿನಾಂಕ: 28-10-96ರ ಆ ಆದೇಶವನ್ನು ರದ್ದುಗೊಳಿಸಲಾಗಿದೆ.

02] ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ನಿಷೇಧಿಸಿದ ಹಿನ್ನೆಲೆಯಲ್ಲಿ, ಶಿಕ್ಷಕರಿಲ್ಲದೇ ಶಾಲೆಗಳ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವುದಾಗಿ ಹಲವಾರು ಸಂಘ ಸಂಸ್ಥೆ, ಆಡಳಿತ ಮಂಡಳಿ ಹಾಗೂ ಸಾರ್ವಜನಿಕರಿಂದ ಆ ನಿಷೇಧವನ್ನು ಸಡಿಲಿಸಲು ಕೋರಿಕೆಗಳು ಬಂದಿದ್ದು, ಅದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಡಿ 46 ಎಸ್‌ಇಪಿ 2006**

**ಬೆಂಗಳೂರು, ದಿನಾಂಕ : 12 ನೇ ಏಪ್ರಿಲ್ 2006.**

03] ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಉಂಟಾದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ 2,106 ಮತ್ತು ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿನ 282 [ಒಟ್ಟು 2,388] ಸಕ್ಷಮ ಪ್ರಾಧಿಕಾರದಿಂದ ಅನುದಾನಕ್ಕೆ ಒಳಪಡಿಸಲಾದ ಬೋಧಕ ಹುದ್ದೆಗಳನ್ನು ತುಂಬಲು ಈ ಕೆಳಕಂಡ ಷರತ್ತಿಗೊಳಪಟ್ಟು ಈ ಮೂಲಕ ಅನುಮತಿ ನೀಡಲಾಗಿದೆ.

(1) ಸಂಬಂಧಿಸಿದ ಅನುದಾನಿತ ಖಾಸಗಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾಗಿರತಕ್ಕದ್ದು. ಹಾಗೂ ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸಿರಬೇಕು.

(2) ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ ಮತ್ತು ನೋಂದಣಿ] ನಿಯಮಾವಳಿ, 1997ರ ಪ್ರಕಾರ ನೋಂದಾವಣಿಯಾಗಿರತಕ್ಕದ್ದು. ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999ರ ಪ್ರಕಾರ ಮಾನ್ಯತೆಯನ್ನು ಪಡೆದು, ಪ್ರಸಕ್ತ ಸಾಲಿಗೆ ನವೀಕರಣವಾಗಿರತಕ್ಕದ್ದು.

(3) ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳ [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದೀಕರಣ] ನಿಯಮಾವಳಿ, 1995ರ, ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999 ಮತ್ತು ಇತರೆ ಸಂಬಂಧಿತ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೇ, ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿರತಕ್ಕದ್ದು ಮತ್ತು ಮಕ್ಕಳಿಗೆ ಹಾನಿಕಾರಕವಾದ ಯಾವುದೇ ರೀತಿಯ ಅನಾರೋಗ್ಯಕರವಾದ ವಾತಾವರಣವನ್ನು

ಹೊಂದಿರಬಾರದು. ಮಕ್ಕಳ ಶೈಕ್ಷಣಿಕ ಚಟುವಟಿಕೆ ಉತ್ತಮ ಮಟ್ಟದಲ್ಲಿರಲು ಅಗತ್ಯವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(4) ಕ್ರಮ ಸಂಖ್ಯೆ: [3]ರ ಉದ್ದೇಶಕ್ಕಾಗಿ, <u>ಅನುಬಂಧ–1</u> ರಲ್ಲಿ ನಿಗದಿಪಡಿಸಿದಂತೆ, ಸಂಬಂಧಿಸಿದ ಪ್ರೌಢಶಾಲೆಯನ್ನು/ಪದವಿ ಪೂರ್ವ ಕಾಲೇಜನ್ನು ಮೌಲ್ಯಮಾಪನಕ್ಕೆ ಒಳಪಡಿಸತಕ್ಕದ್ದು. ಆ ಮೌಲ್ಯಮಾಪನದ ಪ್ರಕಾರ 60ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿದ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಪ್ರಸ್ತುತ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹರಾಗುವುದಿಲ್ಲ.

(5) ಕರ್ನಾಟಕ ಶಿಕ್ಷಣ ಸಂಸ್ಥೆಗಳ [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999ರ ಅಡಿಯಲ್ಲಿ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿ ರಚನೆಯನ್ವಯ ನೇಮಕಾತಿ ಮಾಡಿಕೊಂಡಿರಬೇಕು.

(6) ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಅನುಬಂಧ–1ರ ಕ್ರಮ ಸಂಖ್ಯೆ: [1]ರಲ್ಲಿ ಉಲ್ಲೇಖಿಸಿದಂತೆ ಹೊಂದಿರತಕ್ಕದ್ದು.

(7) ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ಅನುದಾನಕ್ಕೆ ಒಳಪಡಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾಗಿರತಕ್ಕದ್ದು.

(8) ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ನಿಧನ, ನಿವೃತ್ತಿ, ರಾಜೀನಾಮೆ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಖಾಲಿ ಆಗಿರತಕ್ಕದ್ದು.

(9) ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಶಿಕ್ಷಕರು/ಉಪನ್ಯಾಸಕರು ಪ್ರಚಲಿತ ನಿಯಮಗಳ/ಆದೇಶಗಳ ಪ್ರಕಾರ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

(10) ಈಗಾಗಲೇ ನೇಮಕವಾಗಿರುವ ಅಥವಾ ಮುಂದೆ ನೇಮಕವಾಗುವ ಶಿಕ್ಷಕರ/ಉಪನ್ಯಾಸಕರ ನೇಮಕಾತಿಯು ನಿಗದಿತ ಪ್ರಚಲಿತ ಸಿಬ್ಬಂದಿ ಮಾದರಿ ಮತ್ತು ನಿಯಮಗಳನ್ವಯ ಆಗಿರಬೇಕು/ಆಗಿರತಕ್ಕದ್ದು.

(11) ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿ ಮಾಡಿಕೊಂಡ ನೇಮಕಾತಿಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999, ಈ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿರತಕ್ಕದ್ದು. ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆಯಾಗದಿದ್ದಲ್ಲಿ ನಿಯಮಗಳಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಸದರಿ ನಿಯಮಗಳ ಅನುಬಂಧ–1ರನ್ವಯ, ಅದನ್ನು ಮೇಲೆ [3]ರಲ್ಲಿ ಓದಲಾದ ದಿನಾಂಕ: 03–02–2001ರ ಅಧಿಸೂಚನೆಯಂತೆ ತಿದ್ದುಪಡಿ ಮಾಡಿ ನಿಗದಿಪಡಿಸಿದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ, ಆ ಸಮಿತಿಯ ಅನುಮೋದನೆಯನ್ನು ಪಡೆದು ತದನಂತರ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು.

(12) ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಸಂಸ್ಥೆಗಳು ಈ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹತೆ ಪಡೆಯುವುದಿಲ್ಲ.

(13) ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ./ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ಶಿಕ್ಷಣದ ಪರೀಕ್ಷೆಯ ಸಾಮಾನ್ಯ ಫಲಿತಾಂಶವು ಅನುಬಂಧ-1ರ ಕ್ರಮ ಸಂಖ್ಯೆ: [3]ರಲ್ಲಿ ಉಲ್ಲೇಖಿಸಿದಂತೆ ಇರತಕ್ಕದ್ದು.

(14) ಕರ್ನಾಟಕ ಸಂಘಗಳ ನೊಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರಬೇಕು ಹಾಗೂ ಇಲಾಖೆಯ ಮಾಹಿತಿಗಾಗಿ ಪಿಟಿಆರ್ ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು [ಸಕ್ಷಮ ಪ್ರಾಧಿಕಾರಿಯಿಂದ ಧೃಢೀಕರಿಸಲ್ಪಟ್ಟಿರಬೇಕು] ಸಲ್ಲಿಸತಕ್ಕದ್ದು.

(15) ದಿನಾಂಕ: 01-02-2006ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 19 ಟಿಪಿಯು 2004ರಲ್ಲಿ ಹೆಚ್ಚುವರಿ ವಿಭಾಗ/ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವುದನ್ನು ರದ್ದುಪಡಿಸಿರುವ ಹೆಚ್ಚುವರಿ ವಿಭಾಗ/ವಿಷಯಗಳಿಂದ ಉದ್ಭವಿಸುವ ಖಾಲಿ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ.

(16) ಹೆಚ್ಚುವರಿ ಶಿಕ್ಷಕರ/ಉಪನ್ಯಾಸಕರ ಹುದ್ದೆ ಎಂದು ಗುರುತಿಸಿ ಹೆಚ್ಚುವರಿ ಶಿಕ್ಷಕರನ್ನು ಬೇರೆ ಶಾಲೆಗಳಿಗೆ ಸ್ಥಳಾಂತರಿಸಿದ ಖಾಲಿ ಹುದ್ದೆಗಳು ತಾನಾಗಿ ರದ್ದಾಗಿದ್ದು ಅವುಗಳನ್ನು ತುಂಬಲು ಅವಕಾಶವಿಲ್ಲ.

(17) ಹೆಚ್ಚುವರಿ ಶಿಕ್ಷಕರನ್ನು/ಉಪನ್ಯಾಸಕರನ್ನು ಸ್ಥಳಾಂತರಿಸಿ ಪುನರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳದಿದ್ದರೆ ಅಂತಹ ಖಾಲಿ ಹುದ್ದೆಗಳನ್ನು ಶಾಶ್ವತ ಅನುದಾನರಹಿತ ಎಂದು ಆದೇಶಿಸಿದ್ದು, ಅವುಗಳನ್ನು ತುಂಬಲು ಅವಕಾಶವಿಲ್ಲ.

(18) ಸ್ವಾಭಾವಿಕ ಬೆಳವಣಿಗೆ ಮತ್ತು ಹೆಚ್ಚುವರಿ ವಿಭಾಗ/ವಿಷಯದಂತಹ ಕಾರಣಗಳಿಂದ ಉದ್ಭವಿಸಿದ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ.

04] ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಹಾಗೂ ಅದರಂತೆ ಆದ ನೇಮಕಾತಿಗಳನ್ನು ಅನುದಾನ ಸಹಿತ ಅನುಮೋದಿಸುವ ಸಕ್ಷಮ ಪ್ರಾಧಿಕಾರ, ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯಾಯ ಆಯುಕ್ತರುಗಳು ಆಗಿರುತ್ತಾರೆ. ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಸದರಿ ಸಕ್ಷಮ ಪ್ರಾಧಿಕಾರ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಆಗಿರುತ್ತಾರೆ. ಈ ಅಧಿಕಾರವನ್ನು ಸದರಿ ಅಧಿಕಾರಿಗಳೇ ಸ್ವತಃ ಚಲಾಯಿಸತಕ್ಕದ್ದು ಹಾಗೂ ಅದನ್ನು ಅವರು ಯಾವುದೇ ಇತರೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸತಕ್ಕದ್ದಲ್ಲ.

05] ಕಂಡಿಕೆ: 04ರಲ್ಲಿ ಉಲ್ಲೇಖಿಸಲಾದ ಸಕ್ಷಮ ಪ್ರಾಧಿಕಾರಗಳು ಅನುಬಂಧ-1 ಹಾಗೂ ಅನುಬಂಧ - 2ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ, ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದಂತೆ ವಿವರಗಳನ್ನು ಪಡೆದು, ಆಯಾಯ ನೇಮಕಾತಿಯನ್ನು ಅನುದಾನ ಸಹಿತ ಅನುಮೋದಿಸುವ ಬಗ್ಗೆ ಅರ್ಹತೆಯ ಮೇಲೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕದ್ದು.

06] ಆರ್ಥಿಕ ಇಲಾಖೆಯ ದಿನಾಂಕ: 24-02-2006ರ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 94 ವೆಚ್ಚ-8/2006ರ ಮೂಲಕ ನೀಡಿದ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಸಿದ್ದಲಿಂಗಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

12/4/06

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
5) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6) ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7) ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8) ಎಲ್ಲಾ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
9) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8.
11) ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ ( ಸಾಮಾನ್ಯ ).
12) ಉಪ ಕಾರ್ಯದರ್ಶಿ (ಯೋಜನೆ).
13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.